# ಅಮ್ಮನ ಅಪ್ಪುಗೆ



■ ಎನ್. ಜಗನ್ನಾಥ ಪ್ರಕಾಶ್
ಚಿತ್ರಗಳು: ಕೆ.ಎಂ.ಬಿ. ಪ್ರಸಾದ್

ಜೀವ ಜಗತ್ತು ವಿಸ್ಮಯಗಳ ಗೂಡು. ಮಾನವರಿಗಿಂತ ಬಹು ಹಿಂದಿನಿಂದಲೂ ಭೂಮಿಯಲ್ಲಿ ನೆಲೆ ನಿಂತಿರುವ ಪ್ರಾಣಿ ಪಕ್ಷಿಗಳ ಜೀವನ ಬೆರಗು ಹುಟ್ಟಿಸುವ ಹಲವು ಸಂಗತಿಗಳ ಬುತ್ತಿ. ನಮ್ಮ ಊಹೆಗೆ ನಿಲುಕದಷ್ಟು ವೈವಿಧ್ಯಗಳನ್ನು ತನ್ನ ಒಡಲಲ್ಲಿಟ್ಟುಕೊಂಡ ಜೀವಲೋಕ ಹುಟ್ಟಿಸುವ ಅಚ್ಚರಿಗಳ ಸಾಲು ಸಾಲು.

**ಆಪ್ತ ಜೀವ**

ಬುದ್ಧಿವಂತ ಮನುಷ್ಯನಿಗೂ ಮಿಗಿಲಾದ ಬುದ್ಧಿಮತ್ತೆಯ ಪ್ರಾಣಿ, ಪಕ್ಷಿ ಪ್ರಪಂಚ ಸಂತಾನ ಮುಂದುವರಿಕೆಗಾಗಿ ಅನುಸರಿಸುವ ರೀತಿ ರಿವಾಜುಗಳೂ ವಿಶಿಷ್ಟ. ತಮ್ಮ ಪರಿಸರಕ್ಕೆ ತಕ್ಕಂತೆ ಬದುಕು ಸಾಗಿಸುವ ವನ್ಯಜೀವಿಗಳಲ್ಲಿ ಗಂಡು–ಹೆಣ್ಣು ಆಕರ್ಷಣೆ, ಬೆದೆಗೆ ಬರುವ ಸಮಯ, ಸಮ್ಮಿಳನ, ಗರ್ಭ ಧರಿಸುವ ಅವಧಿ. ಸಂತಾನೋತ್ಪತ್ತಿ ಕಾಲ. ತಾಯಿ ಮಕ್ಕಳ ಆರೈಕೆ– ಇವೆಲ್ಲವೂ ಒಂದಕ್ಕಿಂತ ಇನ್ನೊಂದು ವಿಭಿನ್ನ. ಆದರೆ ಬಹಳಷ್ಟು ಜೀವಿಗಳಲ್ಲಿ ಬಹು ಸಮಾನವಾಗಿ ಕಾಣಬಹುದಾದ ಅಂಶವೆಂದರೆ ಹುಟ್ಟಿದ ಕೆಲಕಾಲ ಅಮ್ಮನ ಲಾಲನೆ ಪಾಲನೆ ಮನುಷ್ಯರಲ್ಲಿದ್ದಂತೆ ಅಮ್ಮ ಆಗಷ್ಟೇ ಜನಿಸಿದ ಮರಿಗಳು ನಂಬಿಕೊಂಡ ಆಪ್ತ ಜೀವ.

(8ನೇ ಪುಟ ನೋಡಿ)